**ದಾವಣಗೆರೆ**

**ಬಿಜೆಪಿ** **ಜಿ.ಎಂ. ಸಿದ್ದೇಶ್**

ಮೂಲತಃ ವ್ಯಾಪಾರಿಯಾದರೂ 'ವ್ಯಾಪಾರಂ ದ್ರೋಹ ಚಿಂತನಂ' ಎಂಬುದು ಅವರ ರಾಜಕೀಯ ಬದುಕಿಗೆ ಸೋಕಲಿಲ್ಲ.

# ಅಜಾತ ಶತ್ರುವೇನೂ ಅಲ್ಲ, ಶತ್ರುವೂ ಅಲ್ಲ

**ನವೀನ್ ಎಂ.ಬಿ.**

ತಂದೆ ಮಲ್ಲಿಕಾರ್ಜುನಪ್ಪ ಅವರಂತೆ ಅಜಾತ ಶತ್ರು ಎನಿಸಿಕೊಳ್ಳದೆ ಹೋದರೂ ವಿರೋಧಿಗಳ ಬಾಯಿಗೆ ಆಹಾರ ಆದವರಲ್ಲ ಜಿ.ಎಂ.ಸಿದ್ದೇಶ್. ಸಾಧನೆಯ ಅಂಕಿ-ಅಂಶಕ್ಕೂ, ವಾಸ್ತವ ಸಂಗತಿಗಳಿಗೂ ತೀರ ವ್ಯತ್ಯಾಸ ಕಾಣದು. ಹಾಗೆಂದು ಕೆಲಸವೆಲ್ಲ ಆಗಿವೆ, ಬಾಕಿ ಉಳಿದೇ ಇಲ್ಲ ಎನ್ನಲಾಗದು. ಸಮುದಾಯ ಭವನಕ್ಕೆ ನೆರವು ನೀಡಿದ್ದರ ಹಿಂದೆ ಲಾಭದ ವಾಸನೆ ಇದೆ. ಏಕೆಂದರೆ ಅವು ಮತ ತಂದು ಕೊಡುವ ಕೇಂದ್ರಗಳೆಂಬುದು ರಾಜಕೀಯ ವಿಶ್ಲೇಷಣೆ. ಹಿಂದುಳಿದ ಜಿಲ್ಲೆ ಅಲ್ಲದೇ ಹೋದರೂ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ, ಹಿಂದುಳಿದ ಪ್ರದೇಶಾಭಿವೃದ್ಧಿ ನಿಧಿ ಯೋಜನೆ ತಂದಿದ್ದು ಇವರ ಹೆಗ್ಗಳಿಕೆ. ಉದ್ಯೋಗ ಖಾತ್ರಿ ಅಡಿ ಒಂದಷ್ಟು ಚೆಕ್‌ಡ್ಯಾಂ, ಕೃಷಿ ಹೊಂಡ ಆಗಿದ್ದು ಬಿಟ್ಟರೆ ವಿಫಲತೆ ಕೂಗು ಕೇಳಿ ಬಂದದ್ದೇ ಅಧಿಕ. ಕ್ರಿಯಾಯೋಜನೆ ರೂಪಿಸದೇ ಹೋದದ್ದು ಹಿಂದುಳಿದ ಅಭಿವೃದ್ಧಿ ನಿಧಿಯ ವಿಪರ್ಯಾಸ. ದಾವಣಗೆರೆ ರೈಲ್ವೆ ನಿಲ್ದಾಣ 'ಎ' ದರ್ಜೆಗೆ ಏರಿಕೆ, ಹರಿಹರ, ಹೊಳಲ್ಕೆರೆ ರೈಲ್ವೆ ನಿಲ್ದಾಣ ಅಭಿವೃದ್ಧಿ ಕಂಡಿವೆ. ಪುರ ಯೋಜನೆ ತರುವ ಮಹದಾಸೆ ಕೈಗೂಡಲಿಲ್ಲ. ಈಗಲೂ ರಸ್ತೆಗಳಿಲ್ಲದ, ಬಸ್ಸುಗಳ ಮುಖ ನೋಡದ, ಅಂಗನವಾಡಿ ಕೇಂದ್ರ ಬಾರದ ಹಳ್ಳಿಗಳಿವೆ. ವಿಮಾನ ನಿಲ್ದಾಣ, ದಾವಣಗೆರೆ - ಚಿತ್ರದುರ್ಗ - ಬೆಂಗಳೂರು ರೈಲು ಮಾರ್ಗ, ಕೇಂದ್ರೀಯ ವಿ.ವಿ., ಜವಳಿ ಪಾರ್ಕ್ ನನೆಗುದಿಗೆ ಬಿದ್ದಿವೆ. ಇಡೀ ಜಿಲ್ಲೆಯಲ್ಲಿ ಬಿಜೆಪಿ ಬಂಪರ್ ಬೆಳೆ ತೆಗೆದವರು ಜಿ.ಎಂ.ಸಿದ್ದೇಶ್. ಇದೇ ಹುರುಪು ನಿರ್ಲಕ್ಷಿತ ವಲಯಗಳತ್ತ ಇರಬೇಕಿತ್ತು ಅಂತಾರೆ ಜನ.



## ಕಿರು ಸಂದರ್ಶನ

ಕ್ಷೇತ್ರವನ್ನು ಅಂಗೈಯಲ್ಲಿಟ್ಟು ನೋಡಿದ್ದೇನೆ. ಜಿಲ್ಲೆಯ ಎಲ್ಲ 1862 ಹಳ್ಳಿಗಳಿಗೆ ಭೇಟಿ ನೀಡಿ ಜನರ ಮಧ್ಯೆ ಬೆರೆತು ಕಷ್ಟ-ಸುಖ ಆಲಿಸಿದ್ದೇನೆ. ರಾಜ್ಯ ಸರಕಾರದ ಸಂಧ್ಯಾ ಸುರಕ್ಷಾ, ಭಾಗ್ಯಲಕ್ಷ್ಮಿ, ಸೈಕಲ್ ವಿತರಣೆ, ಶೇ.3ರ ಬಡ್ಡಿ ದರದಡಿ ರೈತರಿಗೆ ಸಾಲ ಯೋಜನೆ ನನ್ನ ಮರು ಗೆಲುವಿಗೆ ಸಹಾಯಕ. ಕೈಗಾರಿಕೆ ಘಟಕಗಳ ಸ್ಥಾಪನೆ, ನೀರಾವರಿ ಯೋಜನೆ, ಕುಡಿಯುವ ನೀರಿನಲ್ಲಿ ಫ್ಲೋರೈಡ್ ನಿವಾರಣೆ, ಸ್ವಯಂ ಉದ್ಯೋಗ ಸೃಷ್ಟಿ, ರೈಲ್ವೆ ಮಾರ್ಗ ನಿರ್ಮಾಣದಂಥ ಕೆಲಸ ಆಗಿಲ್ಲ ಎಂಬ ಸತ್ಯ ಗೊತ್ತಿದೆ. ಆದ್ಯತಾ ಪಟ್ಟಿಯಲ್ಲಿರುವ ಇವುಗಳ ಸಾಕಾರಕ್ಕೆ ಮರು ಆಯ್ಕೆ ಬಯಸಿದ್ದೇನೆ. ಕೇಂದ್ರ ಸರಕಾರಿ ಸ್ವಾಮ್ಯದ ತೋಳಹುಣಸೆ ಜವಳಿ ಗಿರಣಿ ಪುನಶ್ಚೇತನ ಪ್ರಯತ್ನ ವಿಫಲವಾಗಿದೆ ನಿಜ. ಅದಕ್ಕೆ ಸುದೀರ್ಘ ಆಳ್ವಿಕೆ ನಡೆಸಿದ ಕಾಂಗ್ರೆಸ್ಸೇ ಕಾರಣ. ಈ ಪ್ರಯತ್ನ ಕೈಬಿಟ್ಟು 63 ಎಕರೆ ಪ್ರದೇಶದಲ್ಲಿ ಜವಳಿ ಪಾರ್ಕ್ ನಿರ್ಮಿಸಿದ್ದೇವೆ. ಉದ್ಯಮಿಗಳು ಬರುವುದೊಂದೇ ಬಾಕಿ ಇದೆ.

## ಪ್ರತಿಸ್ಪರ್ಧಿಗಳು ಏನೆನ್ನುತ್ತಾರೆ?

ಕಾಂಗ್ರೆಸ್ ಸರಕಾರ ರೂಪಿಸಿದ ಯೋಜನೆ ಕೈಗೆತ್ತಿಕೊಂಡಿದ್ದು ಬಿಟ್ಟರೆ ಇವರ ಸಾಧನೆ ಶೂನ್ಯ. ಜಿಲ್ಲೆಗೆ ಅನುಕೂಲವಾಗುವ ಹೊಸ ಯೋಜನೆಗೆ ಪ್ರಯತ್ನವನ್ನೇ ನಡೆಸಿಲ್ಲ. ತೋರಿಕೆಗೆ ತಂಗುದಾಣ ನಿರ್ಮಿಸಲಾಗಿದೆ. ಮೂಲ ಸೌಲಭ್ಯ ಕಲ್ಪಿಸಲು ಗಮನ ನೀಡಿಲ್ಲ. ಜಿಲ್ಲೆಯ ಸಮಸ್ಯೆ ಅಧ್ಯಯನ ಮಾಡಿ ಪರಿಹಾರ ಕಂಡುಕೊಂಡಿಲ್ಲ.

**-ಎಸ್.ಎಸ್.ಮಲ್ಲಿಕಾರ್ಜುನ್**, ಮಾಜಿ ಸಚಿವ

**53/100**

### 1 ಆಶ್ವಾಸನೆ: ನೀಡಿದ್ದು, ಈಡೇರಿದ್ದು — 8/20

ಸಂಸದರ ನಿಧಿ ಪೂರ್ಣ ಬಳಕೆ, ಸಮುದಾಯ ಭವನ ನಿರ್ಮಾಣ, ಶಾಲೆ ಕೊಠಡಿ, ರಸ್ತೆ ನಿರ್ಮಾಣ, ಕುಡಿವ ನೀರು, ರೈಲ್ವೆ ಕೆಳಸೇತುವೆ ನಿರ್ಮಾಣ ಕುರಿತು ಆಶ್ವಾಸನೆ ನೀಡಿದ್ದರು. ರಾಜೀವ್‌ಗಾಂಧಿ ಸಬ್‌ಮಿಷನ್ ಅಡಿ ಕುಡಿವ ನೀರು ಯೋಜನೆ. ರೈಲ್ವೆ ಕೆಳಸೇತುವೆ ನಿರ್ಮಾಣ ಆರಂಭವಾಗಿ ವರ್ಷ ಕಳೆದರೂ ತಾಂತ್ರಿಕ ಕಾರಣಗಳಿಂದ ಹಿಂದೆ ಬಿದ್ದಿದೆ.

### 2 ಸಂಸದರ ನಿಧಿ ಬಳಕೆ/ಪ್ರಯೋಜನ — 12/20

ಪೂರ್ಣ 10 ಕೋಟಿ ರೂ. ಜತೆಗೆ ಹೆಚ್ಚುವರಿ 3. 60 ಕೋಟಿ ರೂ. ಬಳಕೆಯಾಗಿದೆ. 303 ಸಮುದಾಯ ಭವನ, 80 ಶಾಲೆ ಕೊಠಡಿ. 370 ಕಿ.ಮೀ. ರಸ್ತೆಗೆ 2.27 ಕೋಟಿ ರೂ., ಸಮುದಾಯ ಭವನಕ್ಕೆ 6.54 ಕೋಟಿ ರೂ., ಶಾಲೆ ಕೊಠಡಿಗೆ 1.45 ಕೋಟಿ ರೂ., ಬಸ್ ತಂಗುದಾಣಕ್ಕೆ 1.70 ಕೋಟಿ ರೂ. ಬಳಕೆ ಮಾಡಿದ್ದಾರೆ.

### 3 ಸಂಸತ್ತಿನಲ್ಲಿ ಇವರ ಸಾಧನೆ — 11/20

683 ಪ್ರಶ್ನೆ ಹಾಕಿದ್ದಾರೆ. ಈ ಪೈಕಿ 85 ಚುಕ್ಕೆ ಗುರುತಿನ ಪ್ರಶ್ನೆ. ಕನ್ನಡಕ್ಕೆ ಶಾಸ್ತ್ರೀಯ ಸ್ಥಾನ-ಮಾನ ಕುರಿತಾದ ಪ್ರಶ್ನೆ ಹೊರತುಪಡಿಸಿದರೆ ಬಹುತೇಕ ಪ್ರಶ್ನೆ ಕ್ಷೇತ್ರಕ್ಕೆ ಸಂಬಂಧಿಸಿದವು. ವಿಧೇಯಕಗಳ ಮೇಲೆ ಚರ್ಚೆ ಮಾಡದೇಹೋದರೂ ಮೂರು ಉಪಪ್ರಶ್ನೆ ಹಾಕಿದ್ದಾರೆ. ಸಂಸತ್‌ನಲ್ಲಿ ಮೂರು ವರ್ಷ ವಿತ್ತೀಯ ಸಮಿತಿ ಸದಸ್ಯರಾಗಿದ್ದರು. ದಿ. ಜೆ.ಎಚ್.ಪಟೇಲರು ಸಂಸತ್ತಿನಲ್ಲಿ ಮೊದಲ ಬಾರಿ ಕನ್ನಡ ಮಾತನಾಡಿದ್ದರು. ಸಿದ್ದೇಶ್ ಕೂಡ ಕೆಲ ಪ್ರಶ್ನೆಗಳನ್ನು ಕನ್ನಡದಲ್ಲೇ ಕೇಳಿದ್ದಾರೆ.

### 4 ಸಾಮಾನ್ಯ ಜನರಿಗೆ ಇವರು ಲಭ್ಯರೇ? — 14/20

ಜನಸಂಪರ್ಕ ಕಚೇರಿ ಅಥವಾ ಮನೆಯಲ್ಲಿ ಇವರು ಜನತೆಗೆ ಸುಲಭವಾಗಿ ಲಭ್ಯರು. ಕ್ಷೇತ್ರ ವ್ಯಾಪ್ತಿಯ ಯಾವುದೇ ಗ್ರಾಮದಲ್ಲಿ ನಡೆಯುವ ಕಾರ್ಯಕ್ರಮವನ್ನೂ ಇವರು ತಪ್ಪಿಸುವುದಿಲ್ಲ. ರಾತ್ರಿ ಹೊತ್ತಿನಲ್ಲಿ ದೂರವಾಣಿ ಕರೆ ಮಾಡಿದ ಜನರ ಸಮಸ್ಯೆಗೆ ಸ್ಪಂದಿಸಿದ ಉದಾಹರಣೆಗಳೂ ಇವೆ.

### 5 ರಾಜ್ಯದ ಸಮಸ್ಯೆಗೆ ಇವರ ಸ್ಪಂದನೆ — 8/20

ಕನ್ನಡಕ್ಕೆ ಶಾಸ್ತ್ರೀಯ ಸ್ಥಾನ-ಮಾನ ಕುರಿತು ಹೋರಾಟ. ಮಹಾರಾಷ್ಟ್ರ ಗಡಿ ತಗಾದೆ ಕುರಿತು ಸಂಸತ್ತಿನಲ್ಲಿ ಪ್ರತಿಭಟನೆ. ಕಾವೇರಿ, ಮಹದಾಯಿ ಯೋಜನೆ, ಕಾಫಿ ಬೆಳೆಗಾರರ ಸಮಸ್ಯೆ, ರೈಲ್ವೆ ಸೌಲಭ್ಯ ನಿರ್ಲಕ್ಷ್ಯ ಕುರಿತು ರಾಜ್ಯ ಸಂಸದರ ನಿಯೋಗದಲ್ಲಿ ಸಕ್ರಿಯ ಪಾತ್ರ. ಸಂಸದ ಅನಂತಕುಮಾರ್ ಇತರರ ನೇತೃತ್ವದಲ್ಲಿ ದಿಲ್ಲಿ ಗಾಂಧಿ ಪ್ರತಿಮೆ ಎದುರು ಧರಣಿ.